ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>ಆರ್.ಪಿ.ಸಂಖ್ಯೆ 57<br>ನಮೂನೆ ಸಂಖ್ಯೆ 4<br>(ಸಿವಿಲ್ ) |

**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ.</u>**

**<u>ಎಸ್.ಸಿ. ಸಂಖ್ಯೆ:</u> 111/2021**

| | |
|---|---|
| PW | 2 |
| CW | 7 |

<u>ಸಾಕ್ಷಿಯನ್ನು ಕರೆಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **15.03.2024**</u>

| | | |
|---|---|---|
| ಸಾಕ್ಷಿಯ ಹೆಸರು | : | ಅರೀಪ್ ಬಾಷ |
| ತಂದೆಯ/ಗಂಡನ ಹೆಸರು | : | ಶಬೀರ್ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಗೌರಿಬಿದನೂರು |

<u>ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ</u>

1. ಮೃತ ವಿಶ್ವನಾಥ ಗೊತ್ತಿಲ್ಲ. ಚಾಸಾ -1 ರಿಂದ 5 ಗೊತ್ತಿಲ್ಲ. ಚಾಸಾ - 6 ಗೊತ್ತು. ಚಾಸಾ -8 ಗೊತ್ತಿಲ್ಲ. ಚಾಸಾ - 9 ಗೊತ್ತು. ಚಾಸಾ - 10 ರಿಂದ 15 ಗೊತ್ತಿಲ್ಲ. ನ್ಯಾಯಾಲಯದ ಕಂಪ್ಯೂಟರ್ ನಲ್ಲಿ ಕಾಣಿಸುವ ಆರೋಪಿಗಳ ಪೈಕಿ 1 ಮತ್ತು 3 ನೇ ಆರೋಪಿಗಳು ಗೊತ್ತು. 2 ನೇ ಆರೋಪಿ ಗೊತ್ತಿಲ್ಲ. 4 ನೇ ಆರೋಪಿ ಗೊತ್ತಿಲ್ಲ.

2) ಎರಡು ವರ್ಷಗಳ ಹಿಂದೆ ರಾತ್ರಿ 8.00 ರಿಂದ 9.00 ಗಂಟೆ ಸಮಯದಲ್ಲಿ ಗೌರಿಬಿದನೂರಿನ ನದಿ ಗಡ್ಡೆಯಲ್ಲಿ ರಂಗಪ್ಪ ರವರ ತಿಥಿ ಕಾರ್ಯಕ್ಕೆ ನಾನು , ಚಾಸಾ -6 , 8 , 9 ರವರು ಹೋಗಿದ್ದೆವು. ನಾವು ಊಟ ಮುಗಿಸಿ ಸೇತುವೆ ಮೇಲೆ ಕುಳಿತಿದ್ದೆವು. ಅಗ 1 ಮತ್ತು 3 ನೇ ಆರೋಪಿಗಳು ಬೈಪಾಸ್ ಕಡೆಯಿಂದ ಬಂದರು. ಅಗ ಚಾಸಾ -6 ರವರು 1 ನೇ ಆರೋಪಿಯನ್ನು ಇಲ್ಲಿ ಯಾಕೆ ಬಂದಿದ್ದೀರಿ ಎಂದು ದುಡ್ಡು

PW: 1 CW:7

ಕೇಳುತ್ತಿದ್ದರು. ನಿಮ್ಮದು ದೊಡ್ಡಬಳ್ಳಾಪುರ ಇಲ್ಲಿ ನಿಮಗೆ ಏನು ಕೆಲಸ ಎಂದು ಅವರನ್ನು ಚಾಸಾ -6 ಬೈದು ಕಳುಹಿಸಿದರು. ನಂತರ ನಾವು ಹೊರಟು ಹೋದೆವು.

3) ವಿಶ್ವನಾಥ ಹೇಗೆ ,ಎಲ್ಲಿ ತೀರಿಕೊಂಡ ನನಗೆ ಗೊತ್ತಿಲ್ಲ. ಅವರ ಸಾವಿಗೆ ಯಾರು ಕಾರಣ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**.)**

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

**4)** ಪೊಲೀಸರು ಬರುತ್ತಿದ್ದದ್ದನ್ನು ನೋಡಿ 4 ಜ ನಆರೋಪಿಗಳು ಅಲ್ಲಿಂದ ಓಡಿ ಹೋದರು , ಅಗ ನಾವು ಪೊಲೀಸರನ್ನು ಕಂಡು ಹೇಗೆ ಓಡಿ ಹೋಗುತ್ತಿದ್ದಾರೆ ಎಂದು ಮಾತನಾಡಿಕೊಂಡೆವು ಎಂದರೆ ಸರಿಯಲ್ಲ. ದಿಃ 06.07.2021 ರಂದು ನಾನು , ಮನೋಜಾ , ಶ್ರೀಕಾಂತ , ಚರಣ್ ರಾಜ್ , ಪ್ರಶಾಂತ್ ಸೇರಿ ಬೊಂಬು ಡಾಬಾ ದಲ್ಲಿ ಕುಳಿತಿದ್ದಾಗ ದಿಃ 04.07.2021 ರಂದು ಮನೋಜ ಮತ್ತು ಶೀಕಾಂತ , ಅಕಾಶ್ ಹಾಗೂ ಮಂಜುನಾಥ ರವರೊಂದಿಗೆ ಬಂದಿದ್ದು , ಅ ದಿನ ಶಿಕ್ಷಕ ಎನ್ ವಿಶ್ವನಾಥ ಕೊಲೆಯಾಗಿದ್ದರ ಬಗ್ಗೆ ವಿಚಾರಿಸಿದಾಗ ಮನೋಜ ಮತ್ತು ಶೀಕಾಂತ ಬೇವತು ನಮಗೆ ಗೊತ್ತಿಲ್ಲ ಎಂದು ಗಾಬರಿಯಿಂದ ದ್ವಿಚಕ್ರ ವಾಹನದಲ್ಲಿ ಹೊರಟು ಹೋದರು ಎಂದರೆ ಸರಿಯಲ್ಲ.

**5)** ನಾನು ಈಗ ಓದಿ ಹೇಳಿದಂತೆ '' ಅಷ್ಟೋತ್ತಿಗೆ ಪೊಲೀಸರು ಅಲ್ಲಿಗೆ ಬರುತ್ತಿದ್ದನ್ನು ಕಂಡು ಅವರು ನಾಲ್ಕು ಜನರು ಅಲ್ಲಿಂದ ಓಡಿ ಹೋದರು. ಅಗ ನಾವು ……………………………………………………………………………………… ……………………………………………………………………………,……… ……………………………………………………………ಪ್ರಶಾಂತನಿಗೆ ಕೊಟ್ಟಿದ್ದ ದ್ವಿಚಕ್ರ ವಾಹನವನ್ನು ಮನೋಜನು ತೆಗೆದುಕೊಂಡು ಶ್ರೀಕಾಂತನೊಂದಿಗೆ ಹೊರಟು

ಹೋದನು. " ಎಂದು ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ **- 2** ಎಂದು ಗುರುತಿಸಲಾಯಿತು.

**6)** ನನಗೆ ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ನಾನು ನಿಪಿ - 2 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು **:** ಶ್ರೀ**.**ಎಂ**.** ಎಸ್ **.** ಆರ್ ವಕೀಲರಿಂದ**,** ಆರೋಪಿ/ ತರ ಪರವಾಗಿಃ</u>

**7)** ಏನೂ ಇಲ್ಲಾ.

<u>ಮರುವಿಚಾರಣೆಃ ಇಲ್ಲ**.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 15.03.2024 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ

ಸಹಿ**/-**
ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

PW: 1 CW:7

PW: 1 CW:7